# With 12 proposed colleges, UP set to beat K'taka as medical capital

Hemali Chhapia | TNN

**Mumbai:** For long, the southern states of Andhra Pradesh and Karnataka, followed by Maharashtra, were the top destinations to pursue a medical degree. Not only did these states have the largest count of medical schools, their all-India quota seats would also get lapped up fast, pointing to the top quality of education and facilities there.

When Andhra Pradesh split, Maharashtra moved to the second spot, while Karnataka led the way with 57 colleges offering undergraduate medical education. But that is about to change.

Uttar Pradesh is likely to become the medical capital of India with 12 proposals sent to the Medical Council of India (MCI) to start new colleges. Tamil Nadu has sent proposals for eight medical schools. Maharashtra, on the other hand, is lagging behind.

"We, too, have sent a few proposals for medical colleges and are trying to encourage more trusts to start colleges," said head of Maharashtra's Directorate of Medical Education and Research, Dr Pravin Shingare. But of the five proposals sent last year, the MCI approved only one.

*For full report: www.toi.in*

## LEADING THE PACK

| State | Govt colleges | Seats | Private colleges | Seats | Total colleges | Seats |
|---|---|---|---|---|---|---|
| Karnataka | 18 | 2,650 | 39 | 6,159 | 57 | 8,845 |
| Maharashtra | 23 | 3,240 | 28 | 4,220 | 51 | 7,460 |
| Tamil Nadu | 25 | 3,250 | 24 | 3,600 | 49 | 6,850 |
| Uttar Pradesh | 17 | 2,199 | 31 | 4,300 | 48 | 6,499 |
| Kerala | 10 | 1,350 | 24 | 2,800 | 34 | 4,150 |
| Andhra Pradesh | 12 | 1,900 | 19 | 2,950 | 31 | 4,850 |
| Pan-India | 243 | 33,322 | 257 | 36,940 | 500 | 70,262 |

DECCAN HERALD



# HC allows deemed varsities to collect 75% of prescribed fees



**BENGALURU:** The Karnataka High Court passed an interim order permitting the deemed universities to collect 75% of the fees recommended by the committees constituted by the respective varsities for the courses offered by them for the academic year 2018-19.

The fees will be collected from the first year students for admission to the various courses offered by the universities.

A division bench comprising of Justice A S Bopanna and Justice Mohammad Nawaz, hearing a batch of petitions by the deemed universities, passed orders. Four deemed varsities had moved the court against the state and Fee Regulation Committee claiming that they had no jurisdiction over them on fee matters.

The deemed universities - JSS Academy of Higher Education and Research from Mysuru, Nitte and Yenepoya Universities from Mangaluru and Devraj Urs Academy of Higher Education and Research from Kolar - had sought directions for quashing the order dated June 27, 2018, passed by the Fee Regulatory Committee on the ground that the same was arbitrary and illegal.

The petitioners had contended that Committee is attempting to take away the autonomy of the petitioners with regard to their right to fix their own fee structure. They further contended that such a right is safeguarded under Articles 19(1)(g) and 30(1) as a part and parcel of the fundamental right to carry on their occupation.

The petitioners argued that implementation of the Regulatory Committee's order will result in a complete chaos of the admission process for the academic year 2018-19.

ವಿಜಯ ಕರ್ನಾಟಕ



# ಡೀಮ್ಡ್ ವಿವಿಗಳಿಗೆ ಶೇ.75 ಶುಲ್ಕ ಸಂಗ್ರಹಕ್ಕೆ ಆದೇಶ

■ **ವಿಕ ಸುದ್ದಿಲೋಕ** ಬೆಂಗಳೂರು

ಸ್ವಾಯತ್ತ ವಿವಿಗಳು ವೃತ್ತಿಪರ ಕೋರ್ಸ್‌ಗಳಿಗೆ ನಿಗದಿಪಡಿಸಿದ್ದ ಶೇ.75 ರಷ್ಟು ಶುಲ್ಕ ಸಂಗ್ರಹಕ್ಕೆ ಹೈಕೋರ್ಟ್ ಅನುಮತಿ ನೀಡಿದೆ.

ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಮಂಗಳೂರಿನ ನಿಟ್ಟೆ ಮತ್ತು ಏನಪೋಯಾ ವಿ.ವಿ, ಕೋಲಾರದ ದೇವರಾಜ ಅರಸು ಉನ್ನತ ಶಿಕ್ಷಣ ಅಕಾಡೆಮಿ ಸೇರಿದಂತೆ ಹತ್ತಕ್ಕೂ ಅಧಿಕ ಸ್ವಾಯತ್ತ ವಿವಿಗಳು ಸಲ್ಲಿಸಿರುವ ಅರ್ಜಿ ಆಲಿಸಿದ ನ್ಯಾ.ಎ.ಎಸ್.ಬೋಪಣ್ಣ ಮತ್ತು ನ್ಯಾ.ಪಿ.ಎಂ.ನವಾಜ್ ಅವರಿದ್ದ ವಿಭಾಗೀಯ ಪೀಠ ಬುಧವಾರ ಈ ಆದೇಶ ಹೊರಡಿಸಿತು.



"ಸ್ವಾಯತ್ತ ವಿವಿಗಳು ತಾವು ನಿಗದಿಪಡಿಸಿಕೊಂಡಿದ್ದ ಶುಲ್ಕದ ಶೇ.75 ರಷ್ಟನ್ನು ವಿದ್ಯಾರ್ಥಿಗಳಿಂದ ಸಂಗ್ರಹಿಸಬಹುದು. ಆದರೆ ಆ ಶುಲ್ಕ ನ್ಯಾಯಾಲಯದ ಮುಂದಿರುವ ಅರ್ಜಿಗಳ ಅಂತಿಮ ತೀರ್ಪು ಅವಲಂಬಿಸಿರುತ್ತದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಬೇಕು. ಅಲ್ಲದೆ, ಒಂದು ವೇಳೆ ಹೈಕೋರ್ಟ್‌ನಲ್ಲಿ ಶುಲ್ಕ ಹೆಚ್ಚು ಎಂದು ನಿರ್ಧಾರವಾದರೆ ಹೆಚ್ಚುವರಿಯಾಗಿ ಪಾವತಿಸಿದ್ದ ಶುಲ್ಕವನ್ನು ಮುಂದಿನ ವರ್ಷದ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳಬೇಕು" ಎಂದು ನ್ಯಾಯಪೀಠ ಮಧ್ಯಾಂತರ ಆದೇಶ ನೀಡಿದೆ.

ಡೀಮ್ಡ್ ವಿವಿಗಳು ನಡೆಸುವ ವೃತ್ತಿಪರ ಕೋರ್ಸ್‌ಗಳಿಗೆ 2017-18ನೇ ಸಾಲಿನ ಶುಲ್ಕಕ್ಕಿಂತ ಶೇ.8 ರಷ್ಟು ಮಾತ್ರ ಹೆಚ್ಚಳ ಮಾಡಬೇಕು. ಅದಕ್ಕಿಂತ ಜಾಸ್ತಿ ಮಾಡಲು ಅವಕಾಶವಿಲ್ಲ ಎಂದು ನ್ಯಾ.ಡಿ.ವಿ.ಶೈಲೇಂದ್ರ ಕುಮಾರ್ ನೇತೃತ್ವದ ಶುಲ್ಕ ನಿಯಂತ್ರಣ ಸಮಿತಿ ಮಾಡಿದ್ದ ಶಿಫಾರಸನ್ನು ಡೀಮ್ಡ್ ವಿವಿಗಳು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದವು.

# ಡೀಮ್ಡ್ ವಿ.ವಿ: ಶೇ 75ರಷ್ಟು ಶುಲ್ಕ ಪಾವತಿ

ಬೆಂಗಳೂರು: 'ರಾಜ್ಯದಲ್ಲಿನ ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಮೆಡಿಕಲ್ ಹಾಗೂ ಎಂಜಿನಿಯರಿಂಗ್ ಪದವಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು, ಆಯಾ ಡೀಮ್ಡ್ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ಒಟ್ಟು ಶುಲ್ಕ ಪ್ರಮಾಣದ ಪೈಕಿ ಶೇ75 ರಷ್ಟು ಶುಲ್ಕವನ್ನು ಪ್ರಸಕ್ತ ಶೈಕ್ಷಣಿಕ ಸಾಲಿಗೆ ತಾತ್ಕಾಲಿಕವಾಗಿ ಪಾವತಿಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಶುಲ್ಕದ ಪ್ರಮಾಣವನ್ನು ಶೇ 8ರಷ್ಟು ಹೆಚ್ಚಿಸಿರುವ ನಿವೃತ್ತ ನ್ಯಾಯಮೂರ್ತಿ ಡಿ.ವಿ.ಶೈಲೇಂದ್ರ ಕುಮಾರ್ ನೇತೃತ್ವದ ಶುಲ್ಕ ನಿಯಂತ್ರಣ ಸಮಿತಿಯ ಕ್ರಮ ಪ್ರಶ್ನಿಸಿ ಮೈಸೂರಿನ ಜೆ.ಎಸ್.ಎಸ್. ಅಕಾಡೆಮಿಯ ಉನ್ನತ ಶಿಕ್ಷಣ ಮತ್ತು ಸಂಶೋಧನಾ ವಿಶ್ವವಿದ್ಯಾಲಯ ಸೇರಿದಂತೆ ನಾಲ್ಕು ಡೀಮ್ಡ್ ವಿಶ್ವವಿದ್ಯಾಲಯಗಳು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎ.ಎಸ್. ಬೋಪಣ್ಣ ಮತ್ತು ಮೊಹಮದ್ ನವಾಜ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ ಈ ಕುರಿತಂತೆ ಮಧ್ಯಂತರ ಆದೇಶ ನೀಡಿದೆ.

ಹೈಟೆಕ್ ಸ್ಪರ್ಶ ನೀಡಿರುವ ಶಿಕ್ಷಕ ಮತ್ತು ಎಸ್‌ಡಿಎಂ ಅಧ್ಯಕ್ಷ

SDUAHER

ಕನ್ನಡಪ್ರಭ



# ಡೀಮ್ಡ್ ವಿವಿ ಕೋರ್ಸ್‌ಗೆ ಶೇ.75 ಕಟ್ಟಿ

## ವೈದ್ಯ, ಎಂಜಿನಿಯರಿಂಗ್ ಕೋರ್ಸ್‌ಗೆ ಸರ್ಕಾರಿ ಸಮಿತಿ ನಿಗದಿಪಡಿಸಿದ್ದ ಶುಲ್ಕ ಸದ್ಯಕ್ಕೆ ಅನ್ವಯವಿಲ್ಲ

## ದುಬಾರಿ ಶುಲ್ಕದ ಶೇ.75ರಷ್ಟನ್ನು ವಿದ್ಯಾರ್ಥಿಗಳು ಪಾವತಿಸಬೇಕು: ಹೈಕೋರ್ಟ್ ಮಧ್ಯಂತರ ಆದೇಶ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿನ ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಆಯಾ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ಒಟ್ಟು ಶುಲ್ಕ ಪ್ರಮಾಣದ ಪೈಕಿ ಶೇ.75ರಷ್ಟು ಶುಲ್ಕವನ್ನು ಪ್ರಸಕ್ತ ಸಾಲಿಗೆ ತಾತ್ಕಾಲಿಕವಾಗಿ ಪಾವತಿಸಬೇಕಿದೆ.

ಈ ಸಂಬಂಧ ರಾಜ್ಯ ಹೈಕೋರ್ಟ್ ಬುಧವಾರ ಮಧ್ಯಂತರ ಆದೇಶ ಹೊರಡಿಸಿದ್ದು, ಅರ್ಜಿಗಳ ಕುರಿತು ನ್ಯಾಯಾಲಯವು ಹೊರಡಿಸುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ.

ಖಾಸಗಿ ಕಾಲೇಜುಗಳಲ್ಲಿ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಕಳೆದ ಸಾಲಿನಲ್ಲಿನಿಗದಿಪಡಿಸಿದ್ದಒಟ್ಟುಶುಲ್ಕದಪ್ರಮಾಣವನ್ನು ಶೇ.8ರಷ್ಟು ಹೆಚ್ಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಶೈಲೇಂದ್ರ ಕುಮಾರ್ ನೇತೃತ್ವದ ಶುಲ್ಕ ನಿಯಂತ್ರಣ ಸಮಿತಿಯ ಕ್ರಮ ಪ್ರಶ್ನಿಸಿ ಮೈಸೂರಿನ ಜೆ.ಎಸ್. ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಆ್ಯಂಡ್ ರಿಸರ್ಚ್ ಯೂನಿವರ್ಸಿಟಿ ಹಾಗೂ ಇತರೆ ನಾಲ್ಕು ಡೀಮ್ಡ್ ವಿಶ್ವವಿದ್ಯಾಲಯಗಳು ಹೈಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿದ್ದವು.



ಶುಲ್ಕ ಪ್ರಮಾಣವನ್ನು ಶೇ.40ರಷ್ಟು ಹೆಚ್ಚಳ ಮಾಡುವಂತೆ ತಾವು ತಿಳಿಸಿದ್ದರೂ, ಅದನ್ನು ಬದಿಗೊತ್ತಿ ಶುಲ್ಕ ನಿಯಂತ್ರಣ ಸಮಿತಿಯು ಕೇವಲ ಶೇ.8ರಷ್ಟು ಶುಲ್ಕ ಹೆಚ್ಚಿಸಿರುವುದು ನ್ಯಾಯ ಸಮ್ಮತವಾಗಿಲ್ಲ. ಮೇಲಾಗಿ ತಮ್ಮ ವಿಶ್ವವಿದ್ಯಾಲಯದ ಶುಲ್ಕ ನಿಗದಿ ಸಮಿತಿಯು ತನ್ನದೇ ಆದ ಶುಲ್ಕ ಪ್ರಮಾಣ ನಿಗದಿ ಪಡಿಸಿದ್ದು, ಅಷ್ಟನ್ನೂ ವಿದ್ಯಾರ್ಥಿಗಳಿಂದ ಪಡೆಯಲು ಅನುಮತಿ ನೀಡಿ ಆದೇಶಿಸಬೇಕು ಎಂದು ನ್ಯಾಯಾಲಯವನ್ನು ವಿಶ್ವವಿದ್ಯಾಲಯಗಳು ಕೋರಿದ್ದವು.

ಬುಧವಾರ ಈ ಅರ್ಜಿ ವಿಚಾರಣೆ ನಡೆಸಿದ ನಾಯಮೂರ್ತಿ ಎ.ಎಸ್.ಬೋಪಣ್ಣ ಮತ್ತು ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ವಿಭಾಗೀಯ ನ್ಯಾಯಪೀಠ, ವಿಶ್ವವಿದ್ಯಾಲಯಗಳು ತಮ್ಮ ಶುಲ್ಕ ನಿಗದಿ ಸಮಿತಿ ನಿಗದಿಪಡಿಸಿರುವ ಒಟ್ಟು ಶುಲ್ಕ ಪ್ರಮಾಣದ ಪೈಕಿ ಶೇ.75ರಷ್ಟು ಶುಲ್ಕವನ್ನು ತಮ್ಮಲ್ಲಿನ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕೋರ್ಸ್‌ಗಳಿಗೆಪ್ರವೇಶಪಡೆಯುವವಿದ್ಯಾರ್ಥಿಗಳಿಂದ ತಾತ್ಕಾಲಿಕವಾಗಿ ಪಾವತಿಸಿಕೊಳ್ಳಬಹುದು ಎಂದು ಮಧ್ಯಂತರ ಆದೇಶ ಮಾಡಿದೆ.

ಅಲ್ಲದೆ, ಶೇ.75ರಷ್ಟು ಶುಲ್ಕ ಪಾವತಿಸಿಕೊಳ್ಳುವುದು ಅರ್ಜಿಗಳ ಕುರಿತು ನ್ಯಾಯಾಲಯವು ಹೊರಡಿಸುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ. ಡೀಮ್ಡ್ ಯೂನಿವರ್ಸಿಟಿಗಳು ನಿಗದಿಪಡಿಸಿರುವ ಶುಲ್ಕ ಹೆಚ್ಚಳವಾಗಿದೆ ಎಂದು ನ್ಯಾಯಾಲಯವು ತೀರ್ಪು ನೀಡಿದರೆ, ಈ ಸಾಲಿಗೆ ವಿದ್ಯಾರ್ಥಿಗಳಿಂದ ಹೆಚ್ಚುವರಿಯಾಗಿ ಪಡೆದ ಶುಲ್ಕವನ್ನು ಮುಂದಿನ ಸಾಲಿಗೆ ಹೊಂದಾಣಿಕೆ ಮಾಡಬೇಕು. ಹಾಗೆಯೇ, ಒಂದೊಮ್ಮೆ ಡೀಮ್ಡ್ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ಶುಲ್ಕವು ನ್ಯಾಯಸಮ್ಮತವಾಗಿದೆ ಎಂದು ಆದೇಶಿಸಿದರೆ, ಉಳಿದ ಶೇ.25ರಷ್ಟು ಹಣವನ್ನು ಪಾವತಿಸುವುದಾಗಿ ದೃಢೀಕರಿಸಿದ ಮುಚ್ಚಳಿಕೆಗಳನ್ನು ವಿದ್ಯಾರ್ಥಿಗಳಿಂದ ವಿಶ್ವವಿದ್ಯಾಲಯಗಳು ಪಡೆಯಬೇಕು ಎಂದು ಮಧ್ಯಂತರ ಆದೇಶದಲ್ಲಿ ನ್ಯಾಯಪೀಠ ಸ್ಪಷ್ಟಪಡಿಸಿದೆ.